# ಶಬರಿ

ತಮಿಳುಮೂಲ : ವಿವೇಕಾನಂದದಾಸನ್
ಕನ್ನಡ : ಸ್ವಾಮಿ ರಾಘವೇಶಾನಂದ
ಚಿತ್ರ : ಶಂಕರ್


ಶಬರಿಯ ತಂದೆ ಕ್ಷತ್ರಿಯ ಹಾಗೂ ತಾಯಿ ಬೇಡತಿ. ಅವಳು ಶಬರ ಕುಲಕ್ಕೆ ಸೇರಿದವಳಾದುದರಿಂದ ಅವಳಿಗೆ ಶಬರಿ ಎಂದು ಹೆಸರಿಟ್ಟಿದ್ದರು. ಅವಳ ವಿವಾಹ ನಿಶ್ಚಯವಾದಾಗ, ವಿವಾಹ ಭೋಜನಕ್ಕಾಗಿ ಸಾವಿರಾರು ಮೃಗಗಳನ್ನು ಕೊಂದು ಅಡಿಗೆ ಮಾಡಲು ಏರ್ಪಾಡು ಮಾಡಿದ್ದರು. ಆದರೆ ನಿರಪರಾಧಿ ಪ್ರಾಣಿಗಳನ್ನು ಕೊಲ್ಲಲು ಅವಳ ಮನಸ್ಸು ಒಪ್ಪಲಿಲ್ಲ. ಆದುದರಿಂದ ಅವಳು ಮದುವೆಗೆ ಮುಂಚೆಯೇ ಮನೆ ಬಿಟ್ಟು ಓಡಿಹೋದಳು. ಮದುವೆಯೇ ಮಾಡಿಕೊಳ್ಳದೆ, ಬ್ರಹ್ಮಚಾರಿಣಿಯಾಗೇ ತನ್ನ ಜೀವನವನ್ನೆಲ್ಲಾ ಕಳೆಯಲು ನಿಶ್ಚಯಿಸಿದಳು.

ಅಲ್ಲಿ ಇಲ್ಲಿ ಸುತ್ತಿ ಕೊನೆಗೆ ಮಾತಂಗ ಋಷಿಗಳ ಆಶ್ರಮಕ್ಕೆ ಬಂದಳು. ಅವರು ಅವಳಿಗೆ ಅಲ್ಲೇ ಇರಲು ಆಶ್ರಯಕೊಟ್ಟರು.





ಮಾತಂಗ ಮುನಿಯು ಅವಳ ತಂದೆತಾಯಿಗಳಿಗಿಂತ ಹೆಚ್ಚು ಪ್ರೀತಿ, ಆದರ ತೋರಿಸಿದರು.








ಮಾತಂಗ ಮುನಿ, ಕೀಳು ಜಾತಿಯ ಶಬರಿಗೆ, ಆಧ್ಯಾತ್ಮಿಕ ಸಾಧನೆಯನ್ನು ಹೇಳಿ ಕೊಡುವುದನ್ನು, ಅಲ್ಲಿಯ ಬ್ರಾಹ್ಮಣರು ಒಪ್ಪಲಿಲ್ಲ.





ಮಾತಂಗ ಮುನಿಗಳನ್ನು ಎಲ್ಲ ಋಷಿಗಳೂ ಬಹಿಷ್ಕರಿಸಿದರು. ಒಂದು ದಿನ ಶಬರಿ ಸ್ನಾನ ಮಾಡಲು ನದಿಗೆ ಹೋಗುತ್ತಿದ್ದಳು. ಒಬ್ಬ ಬ್ರಾಹ್ಮಣ ನದಿಯಲ್ಲಿ ಸ್ನಾನ ಮಾಡಿ ಅಲ್ಲಿಂದ ಹಿಂದಿರುಗುತ್ತಿದ್ದ. ಅಕಸ್ಮಾತ್ತಾಗಿ ಅವಳ ಬಟ್ಟೆ ಅವನಿಗೆ ಮುಟ್ಟಿತು. ಅವನು ಕ್ರೋಧದಿಂದ ಕೆಂಡವಾದ.




ಬ್ರಾಹ್ಮಣ ಮತ್ತೆ ಸ್ನಾನ ಮಾಡಲು ನದಿಗೆ ಹೊರಟ. ಅವನು ನೀರಿಗೆ ಇಳಿದುದೇ ತಡ, ನೀರೆಲ್ಲಾ ಕೆಂಪುಬಣ್ಣವಾಗಿ ಹೋಯಿತು. ಅದರಲ್ಲಿ ಸಾವಿರಾರು ಹುಳುಗಳು ಹೊರಳಾಡುತ್ತಿದ್ದುವು. ಅವನು ಅಂತಹ ಪವಿತ್ರ ಶಬರಿಯನ್ನು ಹೀನಾಮಾನವಾಗಿ ಬೈದುದರ ಫಲವೇ ಅದಾಗಿತ್ತು.




ಬಹಳ ವರ್ಷಗಳ ಮೇಲೆ ಶ್ರೀರಾಮಚಂದ್ರನು, ತನ್ನ ವನವಾಸದ ಸಮಯದಲ್ಲಿ ಲಕ್ಷ್ಮಣನೊಡನೆ ದಂಡಕಾರಣ್ಯಕ್ಕೆ ಬಂದನು. ಅಲ್ಲಿ ಅವರು ಶಬರಿಯ ಕುಟೀರಕ್ಕೆ ಬಂದರು. ಶಬರಿ ಭಕ್ತಿಪೂರ್ವಕವಾಗಿ ಅರ್ಪಿಸಿದ ಫಲಗಳನ್ನು ಸಂತೋಷದಿಂದ ಸ್ವೀಕರಿಸಿದರು. ಆಗ ಆ ಕಾಡಿನಲ್ಲಿದ್ದ ಋಷಿಮುನಿಗಳೆಲ್ಲಾ ಶ್ರೀರಾಮಚಂದ್ರನ ದರ್ಶನಕ್ಕಾಗಿ ಅವಳ ಕುಟೀರಕ್ಕೆ ಬಂದರು. ಅವರು ಕೇಳಿದರು...
ಶ್ರೀರಾಮ, ಹತ್ತಿರದಲ್ಲಿ ಒಂದು ನದಿಯಿದೆ. ಹಿಂದೆ ಅದರಲ್ಲಿ ಒಳ್ಳೆಯ ಸಿಹಿಯಾದ ನೀರು ಹರಿಯುತ್ತಿತ್ತು.
9
ಆದರೆ ಅದು ಹಠಾತ್ತಾಗಿ ಕೆಂಪುಬಣ್ಣಕ್ಕೆ ತಿರುಗಿ, ಯಾವುದಕ್ಕೂ ಉಪಯೋಗಿಸಲು ಆಗದಂತೆ ಅತ್ಯಂತ ಮಲಿನವಾಗಿದೆ.
ಯಾಕೆ ಹೀಗೆ ಆಯಿತೆಂದು ನಮಗೆ ಅರ್ಥವಾಗುತಿಲ್ಲ.
8
ತಾವು ಅದಕ್ಕೆ ಕಾರಣವನ್ನು ಕಂಡುಹಿಡಿದು ಹೇಳಬೇಕು.
ಶ್ರೀರಾಮ ಲಕ್ಷ್ಮಣನತ್ತ ನೋಡಿದ. ಆಗ ಲಕ್ಷ್ಮಣ ಕಾರಣವನ್ನು ವಿವರಿಸಿದ.
ನೀವುಗಳು ಮಹಾಮುನಿಯಾದ ಮಾತಂಗ ಋಷಿಗಳನ್ನು ಬಹಿಷ್ಕರಿಸಿದಿರಿ ಹಾಗೂ ಅತಿ ಪವಿತ್ರಳಾದ ಶಬರಿಯನ್ನು ಅವಮಾನಗೊಳಿಸಿದಿರಿ. ಅದರ ಫಲವೇ ಇದು.
ಹಾಗೇನು?
10
ನಿಜಕ್ಕೂ!
ನದಿಯ ಶುದ್ಧಿಗೆ ಏನಾದರೂ ಮಾರ್ಗವಿದೆಯೇ?
11
ಖಂಡಿತ ಇದೆ. ಈ ಸಾಧ್ವಿ ಶಬರಿ ಆ ನೀರನಲ್ಲಿ ಒಮ್ಮೆ ಸ್ನಾನ ಮಾಡಿದರೆ ಆ ನದಿ ಪವಿತ್ರವಾಗಿ ಮತ್ತೆ ಒಳ್ಳೆಯ ನೀರು ಹರಿಯುತ್ತದೆ.
ಶಬರಿ ನೀರಿಗೆ ಇಳಿದ ತಕ್ಷಣ ಆ ನೀರು ಮತ್ತೆ ಪವಿತ್ರವಾಗಿ ಶುದ್ಧವಾದ ನೀರಾಯಿತು.
12
ದೇವರಿಗೆ ಬ್ರಾಹ್ಮಣ, ಅನ್ಯಜನವೆಂಬ ಜಾತಿ ಭೇದವಿಲ್ಲ. ಅವನು ಅಂತರಂಗ ಶುದ್ಧತೆಯನ್ನು ಮಾತ್ರ ನೋಡುತ್ತಾನೆ. ಆ ಮುನಿಗಳೆಲ್ಲಾ ತಮ್ಮ ತಪ್ಪನ್ನು ಅರಿತುಕೊಂಡು ಶಬರಿಯ ಕ್ಷಮೆ ಬೇಡಿದರು.